**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 9/2020**

**ಚಾ.ಸಾ. : 02**

**ಫ್ರಾ.ಸಾ. : 02**

ಸಾಕ್ಷಿಯ ಹೆಸರು : ಗೋವಿಂದ

ತಂದೆಯ ಹೆಸರು : ಮಾದೇವ ನಾಯ್ಕ

ವಯಸ್ಸು : 51 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ : ಮಾವಿನಕಟ್ಟಾ, ಭಟ್ಕಳ

**ದಿನಾಂಕಃ 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನ ಸಮಕ್ಷಮ ಯಾವದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ. 2016 ರಲ್ಲಿ ನನ್ನನ್ನು ಮುರುಡೇಶ್ವರ ಠಾಣೆಗೆ ಕರೆಯಿಸಿ ಪೋಲಿಸರು ಬರೆದಿಟ್ಟ ಎರಡು ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಗೆ ತೋರಿಸಲಾದ ಮೊದಲ ದಾಖಲೆ ದಿಃ 17.12.2016 ರ ಘಟನಾ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ತೋರಿಸಲಾದ ಎರಡನೇ ದಾಖಲೆ ದಿಃ 17.12.2016 ರ ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಎಂದು ಗುರುತಿಸಲಾಯಿತು. ನಿಪಿ. 3 ಮತ್ತು 4 ವಿವರಗಳು ನನಗೆ ಗೊತ್ತಿಲ್ಲ. ಮು ಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಈಗ ನನಗೆ ತೋರಿಸಿದ ಎರಡು ಛಾಯಾಚಿತ್ರದಲ್ಲಿ ನಾನು ಇದ್ದೇನೆ. ಅವುಗಳನ್ನು ನಿಪಿ. 5 ಮತ್ತು 6 ಎಂದು ಗುರುತಿಸಲಾಯಿತು. ಅವುಗಳನ್ನು ಏಕೆ ತೆಗೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಸರಕಾರಿ ಅಭಿಯೋಜಕರು ಅನುಮತಿಯನ್ನು ಕೇಳಿದ್ದು ಈ ಮೇಲಿನ ಪ್ರತಿಕೂಲ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದ**

2. ದಿಃ 17.12.2016 ರಂದು ತನಿಖಾಧಿಕಾರಿಗಳಾದ ಚಾಸಾ 23 ರವರು ನನ್ನನ್ನು ಹಾಗೂ ಚಾಸಾ 3 ರವರನ್ನು ಭಟ್ಕಳ ತಾಲೂಕಿನ ಮುರುಡೇಶ್ವರ ಬೆಂಗ್ರೆ-II ಗ್ರಾಮದ ಬಂಗಾರಮಕ್ಕಿಯ ರೈಲ್ವೆಬ್ರಿಡ್ಜ ಹತ್ತಿರ ರೈಲ್ವೆ ಕಿ ಮೀ ಕಲ್ಲು ನಂಬರ್ 602 ರ ರೈಲ್ವೆ ಹಳಿಯ ಹತ್ತಿರ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಸಾಕ್ಷಿದಾರರಾದ ಚಾಸಾ 9 ರವರು ಹಾಜರಿದ್ದು ಸ್ಥಳವನ್ನು ತೋರಿಸಿದರು ಮತ್ತು ರೈಲ್ವೆ ಹಳಿಯ ಬದಿಯಲ್ಲಿ ಬಿದ್ದಿದ್ದ ಮು ಮಾ 1 ನ್ನು ತೋರಿಸಿ ಅದನ್ನು ಮೃತೆಯು ಉಪಯೋಗಿಸುತ್ತಿದ್ದಳು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಸಮಯ ಮು ಮಾ 1 ಮತ್ತು ಅಲ್ಲಿಯೇ 3 ಫೀಟ್ ಅಂತರದಲ್ಲಿ ಜಲ್ಲಿ ಕಲ್ಲಿನ ಮೇಲೆ ಬಿದ್ದಿದ್ದ ಮು ಮಾ 2 ನ್ನು ಸಾಕ್ಷಿದಾರರು ತೋರಿಸಿದ ಮೇರೆಗೆ ತನಿಖಾಧಿಕಾರಿಗಳು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಬಗ್ಗೆ ತನಿಖಾಧಿಕಾರಿಗಳಾದ ಚಾಸಾ 23 ರವರು ಬೆಳಗಿನ 11 ಗಂಟೆಯಿಂದ ಮದ್ಯಾಹ್ನ 12 ಗಂಟೆಯವರೆಗೆ ಸ್ಥಳದಲ್ಲಿಯೇ ನಿಪಿ. 3 ರಂತೆ ಪಂಚನಾಮೆ ಮಾಡಿ ನನ್ನ ಹಾಗೂ ಚಾಸಾ 3 ರವರ ಸಹಿಗಳನ್ನು ಪಡೆದಿದ್ದರು ಮತ್ತು ಅದೇ ಕಾಲಕ್ಕೆ ನಿಪಿ 4 ನ್ನು ತಯಾರಿಸಿ ಅದಕ್ಕೂ ಸಹಾ ನನ್ನ ಮತ್ತು ಚಾಸಾ 3 ರವರ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ನಿಪಿ. 3 ಪಂಚನಾಮೆ ಕಾಲಕ್ಕೆ ನಿಪಿ 5 ಮತ್ತು 6 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಜಿ ಎನ್ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-
(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ